# ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ

## ಬಸವ ಭವನ, ಹೈಗ್ರೌಂಡ್ಸ್, ಬೆಂಗಳೂರು-560001

ದಿನಾಂಕ: 02.11.2021

ಸಂಖ್ಯೆ: ಕರಾಆ/ಆಡಳಿತ/11/2003-04

## ಸುತ್ತೋಲೆ

ವಿಷಯ : ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ ಹಾಗೂ ಜಿಲ್ಲಾ ಆಯೋಗಗಳ ಅಧಿಕಾರಿ-ನೌಕರರಿಗೆ ದೀಪಾವಳಿ ಹಬ್ಬದ ಪ್ರಯುಕ್ತ ದಿನಾಂಕ 04.11.2021ರಂದು ರಜಾ ದಿನವಾಗಿ ಘೋಷಿಸುವ ಬಗ್ಗೆ

- - - -

ಸರ್ಕಾರವು ದಿನಾಂಕ 03.11.2021 ಹಾಗೂ 05.11.2021ರಂದು ನರಕ ಚತುರ್ದಶಿ ಹಾಗೂ ದೀಪಾವಳಿ ಹಬ್ಬದ ಪ್ರಯುಕ್ತ ಸಾರ್ವತ್ರಿಕ ರಜೆಯನ್ನಾಗಿ ಘೋಷಿಸಲಾಗಿರುತ್ತದೆ. ದಿನಾಂಕ 04.11.2021ರಂದು ದೀಪಾವಳಿ ಅಮಾವಾಸ್ಯೆಯಿರುವುದರಿಂದ ದಿನಾಂಕ 03.11.2021ರಿಂದ ದಿನಾಂಕ 05.11.2021ರವರೆಗೆ ನಿರಂತರವಾಗಿ ದೀಪಾವಳಿ ಹಬ್ಬವನ್ನು ಆಚರಿಸುವ ಕಾರಣ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ವಕೀಲರ, ಪಕ್ಷಕಾರರ ಹಾಗೂ ಸಿಬ್ಬಂದಿಗಳ ಹಿತದೃಷ್ಟಿಯಿಂದ ದಿನಾಂಕ 02.11.2021, 04.11.2021 ಹಾಗೂ 06.11.2021ರಂದು ರಜೆಯೆಂದು ಘೋಷಿಸಲಾಗಿರುತ್ತದೆ. ಆದ್ದರಿಂದ ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳಿಗೆ ಹಾಜರಾಗುವ ಪಕ್ಷಕಾರರ ಹಾಗೂ ವಕೀಲರ ಮತ್ತು ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳ ಅಧಿಕಾರಿ-ನೌಕರರ ಹಿತದೃಷ್ಟಿಯಿಂದ ದೀಪಾವಳಿ ಹಬ್ಬವನ್ನು ಆಚರಿಸುವ ಸಲುವಾಗಿ ದಿನಾಂಕ 04.11.2021ರಂದು ಸಾರ್ವತ್ರಿಕ ರಜೆಯೆಂದು ಘೋಷಿಸಿ ದಿನಾಂಕ 27.11.2021ರಂದಿನ 4ನೇ ಶನಿವಾರದ ಸಾರ್ವತ್ರಿಕ ರಜೆಯನ್ನು ಸಾರ್ವತ್ರಿಕ ಕೆಲಸದ ದಿನವನ್ನಾಗಿ ಘೋಷಿಸಲಾಗಿದೆ.

ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳ ಎಲ್ಲಾ ಅಧಿಕಾರಿ-ನೌಕರರು ದಿನಾಂಕ 04.11.2021ರ ಬದಲಾಗಿ ದಿನಾಂಕ 27.11.2021ರ 4ನೇ ಶನಿವಾರದಂದು ಕರ್ತವ್ಯಕ್ಕೆ ಹಾಜರಾಗಿ ಕಾರ್ಯನಿರ್ವಹಿಸತಕ್ಕದ್ದು. ರಾಜ್ಯ ಆಯೋಗದ ನಿರ್ದೇಶನದ ಮೇರೆಗೆ ದಿನಾಂಕ 04.11.2021ರಂದು ಯಾವುದೇ ತುರ್ತು ಮಾಹಿತಿಯ ಅವಶ್ಯಕತೆಯಿದ್ದಲ್ಲಿ, ಕಛೇರಿಗೆ ಹಾಜರಾಗಿ ಮಾಹಿತಿ ಒದಗಿಸುವ ನಿಟ್ಟಿನಲ್ಲಿ ಜಿಲ್ಲಾ ಆಯೋಗಗಳು ಸೂಕ್ತ ವ್ಯವಸ್ಥೆ ಮಾಡಿಕೊಂಡಿರತಕ್ಕದ್ದು.

ಮಾನ್ಯ ಅಧ್ಯಕ್ಷರ ಆದೇಶಾನುಸಾರ,

2/11/21

(ರಾಜು.ಎನ್.)

ರಿಜಿಸ್ಟ್ರಾರ್ ಮತ್ತು ಆಡಳಿತಾಧಿಕಾರಿಗಳು,

ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ,

ಬಸವ ಭವನ, ಬೆಂಗಳೂರು.

ಬೆಂಗಳೂರು

ಪ್ರತಿಗಳು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಹಾರ, ನಾಗರಿಕ ಸರಬರಾಜು, ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನ ಶಾಸ್ತ್ರ ಇಲಾಖೆ, ವಿಕಾಸ ಸೌಧ, ಬೆಂಗಳೂರು-ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ನ್ಯಾಯಾಂಗ ಸದಸ್ಯರು ಹಾಗೂ ಮಹಿಳಾ ಸದಸ್ಯರು, ಕರ್ನಾಟಕ ರಾಜ್ಯ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗ, ಪ್ರಧಾನ ಪೀಠ ಹಾಗೂ ಹೆಚ್ಚುವರಿ ಪೀಠ.
3. ಮಾನ್ಯ ಅಧ್ಯಕ್ಷರು, ಸದಸ್ಯರು ಹಾಗೂ ಮಹಿಳಾ ಸದಸ್ಯರು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ (ಎಲ್ಲಾ ಜಿಲ್ಲಾ ಆಯೋಗಗಳಿಗೆ).
4. ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು, ಬೆಂಗಳೂರು ವಕೀಲರ ಸಂಘ, ಬೆಂಗಳೂರು.
5. ಸಹಾಯಕ ರಿಜಿಸ್ಟ್ರಾರ್ ಹಾಗೂ ಸಹಾಯಕ ಆಡಳಿತಾಧಿಕಾರಿಗಳು, ಎಲ್ಲಾ ಜಿಲ್ಲಾ ಆಯೋಗಗಳು (ಜಿಲ್ಲಾ ಆಯೋಗಗಳ ಸೂಚನಾ ಫಲಕದಲ್ಲಿ ಪ್ರಕಟಿಸುವ ಸಲುವಾಗಿ.)
6. ರಾಜ್ಯ ಆಯೋಗ ಹಾಗೂ ಜಿಲ್ಲಾ ಆಯೋಗಗಳ ಇತರೆ ಎಲ್ಲಾ ಅಧಿಕಾರಿ-ನೌಕರರಿಗೆ.
7. ಟಿಎಸ್‌ಪಿ, ರಾಜ್ಯ ಆಯೋಗ (ರಾಜ್ಯ ಆಯೋಗದ ಜಾಲತಾಣದಲ್ಲಿ ಪ್ರಕಟಿಸುವ ಸಲುವಾಗಿ).
8. ರಾಜ್ಯ ಆಯೋಗದ ಸೂಚನಾ ಫಲಕಕ್ಕೆ.
9. ಕಛೇರಿ ಪ್ರತಿ.